<u>ದಿನಾಂಕಃ 17-02-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ 1 ರಿಂದ 3 ಮತ್ತು 5 ರಿಂದ 7 ಏನೂ ಇಲ್ಲ .</u>

<u>ಪಾಟೀ ಸವಾಲು - 4 ನೇ ಪ್ರತಿವಾದಿ ಪರ ಶ್ರೀ ಬಿ ಎಸ್ ಎನ್ ವಕೀಲರಿಂದಃ</u>

ಆನಂದರಾವ್ ಭಟ್ ರವರ ತಂದೆಯ ಹೆಸರು ವೆಂಕಟ ಸುಬ್ಬಯ್ಯ. ಆನಂದರಾವ್ ಭಟ್ ರವರ ಹಿರಿಯ ಮಗನಿಗೆ ನನ್ನ ತಂಗಿಯನ್ನು ಕೊಟ್ಟು ಸಂಬಂಧ ಬೆಳೆಸಿಕೊಂಡಿದ್ದೇವೆ. ಆ ಸಂಬಂಧದ ಆಧಾರದ ಮೇಲೆ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನ್ಯಾಯಾಲಯದಿಂದ ಸಾಕ್ಷಿ ನುಡಿಯುವಂತೆ ಯಾವುದೇ ಸಮನ್ಸ್ ಬಂದಿಲ್ಲ. ನಾನು ತಂಗಿಯ ಮನೆಗೆ ಬಂದಾಗ ನಮ್ಮ ಭಾವ ಹೇಳಿದರು ಕಾರಣ ಸಾಕ್ಷಿ ನುಡಿಯಲು ಬಂದಿದ್ದೇನೆ. ರಾಮು ಎನ್ನುವವರು ಈ ಕೇಸನ್ನು ಹಾಕಿದ್ದಾರೆ. ರಾಮುರವರ ಹಿರಿಯ ಅಣ್ಣ ಶ್ರೀಧರ ನನ್ನ ತಂಗಿಯ ಗಂಡ. ಶ್ರೀಧರ ಇವತ್ತು ನ್ಯಾಯಾಲಯಕ್ಕೆ ಬಂದಿಲ್ಲ. ಅವರಿಗೆ ಕಿವಿ ಕೇಳುವುದಿಲ್ಲ. ತುಂಬಾ ವರ್ಷಗಳಿಂದ ಅವರಿಗೆ ಕಿವಿ ಕೇಳಿಸುವುದಿಲ್ಲ. ಮಧ್ಯಂತರದಿಂದ ಸುಮಾರು 25 ವರ್ಷಗಳಿಂದ ಅವರಿಗೆ ಕಿವಿ ಕೇಳುವುದಿಲ್ಲ. ತುಂಬಾ ಗಟ್ಟಿಯಾಗಿ ಹೇಳಬೇಕು ಮೈಕ್ ನಲ್ಲಿ ಹೇಳಿದಷ್ಟು ಗಟ್ಟಿಯಾಗಿ ಹೇಳಬೇಕು. ಕಾರಣ ಅವರು ಯಾವುದೇ ವ್ಯವಹಾರದಲ್ಲಿ ಭಾಗವಹಿಸುವುದಿಲ್ಲ. ಈ ಕೇಸಿನಲ್ಲಿ ರಾಮು ಒಬ್ಬರೇ ಪಾರ್ಟಿ ಇದ್ದಾರೆ. ರಾಮು ರವರು ವಸಂತರವರ ಮೇಲೆ ಈ ಕೇಸನ್ನು ಹಾಕಿದ್ದಾರೆ. ನನ್ನ ಭಾವ ಶ್ರೀಧರ ಕೋರ್ಟ್ ಗೆ ಬಂದು ತಕರಾರನ್ನು ಹಾಕಿಲ್ಲ, ಶ್ರೀಧರ್ ರವರ ಎಲ್ಲಾ ವ್ಯವಹಾರಗಳನ್ನು ರಾಮುರವರೇ ನೋಡಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ಶ್ರೀಧರ ರವರು ನನಗೆ ಕೋರ್ಟ್ ನಲ್ಲಿ ನಡೆಯುತ್ತಿರುವ ವಿಚಾರ ಹೇಳಿಲ್ಲ.

ಕೋರ್ಟ್ ನಲ್ಲಿ ಕೊಪ್ಪದಲ್ಲಿರುವ ಮನೆಯ ಬಗ್ಗೆ ದಾವೆ ಹಾಕಿರುವುದಾಗಿ ಗೊತ್ತಿದೆ. ಸದರಿ ಮನೆ ವಾಟರ್ ಟ್ಯಾಂಕ್ ರೋಡ್ ನಲ್ಲಿದೆ. ಸದರಿ ಮನೆ ಮೂಲತಃ ಶಕುಂತಲಮ್ಮ ರವರಿಗೆ ಸಂಬಂಧ ಪಟ್ಟಿದ್ದು. ಶಕುಂತಲಮ್ಮ ನವರಿಗೆ ಸದರಿ ಮನೆ ಅವರ ಗಂಡನಿಂದ ಬಂದಿರುತ್ತದೆ. ಯಾವ ರೀತಿ ಬಂದಿರುತ್ತದೆ ಗೊತ್ತಿಲ್ಲ. ಆ ಮನೆಗೆ ಸಂಬಂಧ ಪಟ್ಟಂತೆ ಹಿಸ್ಸಾ-

ಪತ್ರವನ್ನು ನೋಡಿರುತ್ತೇನೆ. 2002 ನೇ ಇಸವಿಯಲ್ಲಿ ಹಿಸ್ಸಾ ಪತ್ರ ಆಗಿದ್ದು, ಅದರ ನಂತರ ನಾನು ಹೋಗಿ ಬರುತ್ತಿದ್ದೆ, ಆಗ ಹಿಸ್ಸಾ ಪತ್ರ ನೋಡಿರುತ್ತೇನೆ. ನಾನು ಹಿಸ್ಸಾ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಹಾಕಿಲ್ಲ. ಹಿಸ್ಸಾ ಪತ್ರವನ್ನು 8 ಜನರಿಗೆ ಮಾಡಿದ್ದರು ಆದರೆ ಎಷ್ಟು ಪ್ರತಿಗಳನ್ನು ಮಾಡಿದ್ದರು ಗೊತ್ತಿಲ್ಲ. ಹಿಸ್ಸಾ ಪತ್ರವನ್ನು ನೋಡಿದ ದಿನಾಂಕ ನೆನಪಿಲ್ಲ. ಶುಕುಂತಲಮ್ಮಾ ಹಿಸ್ಸಾ ಪತ್ರದಲ್ಲಿ ಮೊದಲನೇ ಹಿಸ್ಸಾ ದಾರರು ಶಕುಂತಲಮ್ಮಾ ನವರಿಗೆ ಮನೆಯನ್ನು ಹೊರತು ಪಡಿಸಿ 1 ಎಕರೆ ಚಿಲ್ಲರೇ ತೋಟ ಕೊಟ್ಟಿದ್ದಾರೆ. ಹಿಸ್ಸಾ ಪತ್ರದ ಪ್ರಕಾರ ಎಲ್ಲರೂ ಅವರವರ ಸ್ವತ್ತನ್ನು ಪಡೆದುಕೊಂಡು ಅವರವರ ಹಿಸ್ಸೆಯ ಆಸ್ತಿಗಳನ್ನು ಸ್ವಾಧೀನತೆಯನ್ನು ಹೊಂದಿದ್ದಾರೆ ಎಂದರೆ ಸರಿ. ಶಕುಂತಲಮ್ಮಾ ನಮ್ಮ ಕುಟುಂಬಕ್ಕೆ ಮೂಲತಃ ಸಂಬಂಧಿ ಅಲ್ಲ ಎಂದರೆ ಸರಿ.

1 ಎಕರೆ 2 ಗುಂಟೆ ಜಾಗ ಯಾವ ಸರ್ವೆ ನಂಬರ್ ನಲ್ಲಿದೆ ಗೊತ್ತಿಲ್ಲ. ಅದನ್ನು ಶಕುಂತಲಮ್ಮಾ ಮತ್ತು ಮಗ ವಸಂತ ನೋಡಿಕೊಂಡು ಬರುತ್ತಿದ್ದರು. ಮನೆಯನ್ನು ಶಕುಂತಲಮ್ಮಾ ಮತ್ತು ಮಗ ವಸಂತರವರು ನೋಡಿಕೊಂಡು ಬರುತ್ತಿದ್ದರು. ಶಕುಂತಲಮ್ಮಾ ರವರಿಗೆ ಆರೋಗ್ಯ ಸರಿ ಇಲ್ಲ ಎಂಬ ವಿಚಾರವನ್ನು ನನ್ನ ಮುಖ್ಯ ವಿಚಾರಣೆ ಪತ್ರದಲ್ಲಿ ಹೇಳಿರುವುದನ್ನು ಯಾರೂ ಹೇಳಿರುವುದಿಲ್ಲ ನಾನು ಕಣ್ಣಾರೆ ನೋಡಿರುತ್ತೇನೆ. ಕಿವಿ ದೋಷ ಬಿಟ್ಟು ಶಕುಂತಲಮ್ಮಾ ರವರಿಗೆ ಬೇರೆ ಯಾವುದೇ ದೋಷ ಇರಲಿಲ್ಲ ಎಂದರೆ ಸಾಕ್ಷಿ ಕಣ್ಣು ದೋಷ ಇತ್ತು ಎಂದು ನುಡಿದಿರುತ್ತಾರೆ. ಓದಬೇಕದಾರೆ ಶಕುಂತಲಮ್ಮಾ ಕನ್ನಡಕ ಹಾಕುತ್ತಿದ್ದರು. ಶಕುಂತಲಮ್ಮಾ ದಿನಪತ್ರಿಕೆ ಹಾಗೂ ಆಧ್ಯಾತ್ಮಿಕ ಪುಸ್ತಕಗಳನ್ನು ಓದುತ್ತಿದ್ದರು. ಓದುವ ಅಭ್ಯಾಸ ನಿರಂತರವಾಗಿತ್ತು ಎಂದರೆ ಸರಿಯಲ್ಲ. ಹಾಡಿನ ಪುಸ್ತಕ ಮಾತ್ರ ಹೆಚ್ಚಾಗಿ ಓದುತ್ತಿದ್ದರು. ನಾನು ಶಕುಂತಲಮ್ಮಾ ರವರನ್ನು ಅವರ ಮನೆಯಲ್ಲೇ ನೋಡಿರುತ್ತೇನೆ. ನಾನು ವರ್ಷಕ್ಕೆ ಒಂದೆರಡು ಬಾರಿ ಅವರ ಮನೆಗೆ ಹೋಗಿ ಬರುತ್ತಿದ್ದೆ. ನಾನು ನೇರವಾಗಿ ಅವರ ಮನೆ ಬಾಳ್ ಕಾರ್ ಗೆ ಹೋಗುತ್ತಿದ್ದೆ. ಶಕುಂತಲಮ್ಮಾ ರವರವನ್ನು ಕೊನೆಯ ಕಾಲದಲ್ಲಿ ತೀರ್ಥಹಳ್ಳಿಯ ಮೇಳಿಗೆ ಆಸ್ಪತ್ರೆಯಲ್ಲಿ ಸೇರಿಸಿದ್ದರು. ಆಸ್ಪತ್ರೆಗೆ ಸೇರಿಸಿದ ದಿನಾಂಕ ನೆನಪಿಲ್ಲ. ಸತ್ಯನಾರಾಯಣ ಡಾ. ಅವರಿಗೆ ಚಿಕಿತ್ಸೆಯನ್ನು ನೀಡಿರುತ್ತಾರೆ.

ಶಕುಂತಲಮ್ಮಾ ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ. ನಾನು ನನ್ನ ಭಾವ ಶ್ರೀಧರನಿಗೆ ಸಹಕಾರ ಆಗಲೀ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಭಾವ ಶ್ರೀಧರನಾಗಲೀ ಹಾಗೂ ಅವರ ಶ್ರೀಮತಿಯವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿದ್ದಾರೋ ಗೊತ್ತಿಲ್ಲ. ನಾನು ಯಾವತ್ತೂ ಕೂಡ ಶಕುಂತಲಮ್ಮಾ ನವರನ್ನು ನೋಡಿಲ್ಲ ನಾನು ನನ್ನ ತಂಗಿ ಹಾಗೂ ಭಾವನಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂಗಿ ಹಾಗೂ ಭಾವನಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ಹೇಳಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನನ್ನ ಅನುಭವದಂತೆ ಈ ಪ್ರಮಾಣ ಪತ್ರ ಬರೆಸಿದ್ದೇನೆ ಎಂದು ಒಕ್ಕಣಿಕೆ ಹಾಕಿಸಿದ್ದೇನೆ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ